29. Hanumapur

DHARWAD

1. Hanumnhal
2. Kumbhapur
3. Durgadkeri
4. Hosbal
5. Mallur

SHIGGAON

1. Chikkabandigeri
2. Jalligatti
3. Maokabasarkatti
4. Sidalapur
5. Aratal
6. Surupgatti
7. Shadgarvalli
8. Jondalgatti
9. Motalli
10. Kargi
11. Arikatti
12. Puradkeri
13. Kanchikoppa
14. Malagi
15. Purkondikoppa
16. Yammiganur

BYADAGI

1. Kallapur
2. Dhummihal
3. Chikkalli
4. Lakamajikoppa
5. Ramagondanahalli
6. Mattikatti

ಕಡೂರು ತಾಲ್ಲೂಕಿನಲ್ಲಿ ಮುಂಗಾರು ಬೆಳೆಗೆ ಕಂಬಳಿ ಹುಳುವಿನ ಹಾವಳಿ

1996 - ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡೂರು ತಾಲ್ಲೂಕಿನಲ್ಲಿ ಕಂಬಳಿಹುಳಿವಿನ ಹಾವಳಿ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಎಷ್ಟು ಹೆಕ್ಟೇರಿನ ಮುಂಗಾರಿನ ಬೆಳೆಗೆ ಕಂಬಳಿ ಹುಳುವಿನ ಹಾವಳಿ ಇದೆ?

ಇ) *ಈಗಾಗಲೇ ಸರ್ಕಾರದ ಈ ಪ್ರದೇಶದಲ್ಲಿ ಎಪಿಡಮಿಕ್ ಪ್ರದೇಶವೆಂದು ಘೋಷಣೆ ಮಾಡಿದೆಯೇ?*

ಈ) *ಕೇಂದ್ರ ಸರ್ಕಾರಕ್ಕೆ ಎಂಡೋಮಿಕ್ ಪ್ರದೇಶವೆಂದು ಸೇರ್ಪಡೆ ಮಾಡಲು ಸರ್ಕಾರದವರು ಶಿಫಾರಸ್ಸು ಮಾಡಲು ಪರಿಶೀಲಿಸುವರೇ?*

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ಹೌದು.

ಆ) ಪ್ರಸಕ್ತ 1995-96ನೇ ಸಾಲಿನ ಮುಂಗಾರಿನಲ್ಲಿ 1896 ಹೆ. ಪ್ರದೇಶದಲ್ಲಿ ಕಂಬಳಿ ಹುಳುವಿನ ಹಾವಳಿ ಕಂಡುಬಂದಿರುತ್ತದೆ.

ಇ) ಸರ್ಕಾರ ಈ ಪ್ರದೇಶವನ್ನು ಎಪಿಡಮಿಕ್ ಪ್ರದೇಶವೆಂದು ಘೋಷಣೆ ಮಾಡಿರುವುದಿಲ್ಲ.

ಈ) ಕೇಂದ್ರ ಪುರಸ್ಕೃತ ಯೋಜನೆಯಡಿ ಎಂಡೋಮಿಕ್ ಪ್ರದೇಶವೆಂದು ಘೋಷಿಸುವ ಯೋಜನೆಯು 1992-93ನೇ ಸಾಲಿನಿಂದ ರದ್ದಾಗಿರುವುದರಿಂದ ಶಿಫಾರಸ್ಸು ಮಾಡಿರುವುದಿಲ್ಲ.

ದ್ವಿಚಕ್ರ ವಾಹನಗಳ ಕಳ್ಳತನವನ್ನು ತಡೆಗಟ್ಟುವ ಬಗ್ಗೆ

1997 - ಶ್ರೀ ಕುಂಬ್ಳೆ ಸುಂದರ್ ರಾವ್ (ಸುರತ್ಕಲ್) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಕಳೆದ ಐದು ವರ್ಷಗಳಲ್ಲಿ ಕಳವು ಆದ ದ್ವಿಚಕ್ರ ವಾಹನಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಪತ್ತೆಯಾದ ವಾಹನಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)*

ಆ) *ಇತ್ತೀಚಿನ ವರ್ಷಗಳಲ್ಲಿ ವಾಹನಗಳ ಕಳ್ಳತನದ ಸಂಖ್ಯೆಯು ವೃದ್ಧಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಆ ಬಗ್ಗೆ ತೆಗೆದುಕೊಂಡ ಕ್ರಮಗಳೇನು;*

ಇ) *ದ್ವಿಚಕ್ರ ವಾಹನಗಳು ನಗರ ಪ್ರದೇಶಗಳಲ್ಲಿನ ನಿಲುಗಡೆ ಸ್ಥಳಗಳಿಂದ ಮತ್ತು ಇತರ ಸ್ಥಳಗಳಿಂದ ಕಳವು ಆಗುತ್ತಿರುವುದನ್ನು ತಡೆಗಟ್ಟಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಮಂತ್ರಿಗಳು) :

ಅ) i) ಕಳುವಾಗಿರುವ ವಾಹಗಳ ಸಂಖ್ಯೆ 12,067

ii) ಪತ್ತೆಯಾಗಿರುವ ವಾಹನಗಳ ಸಂಖ್ಯೆ 3,571

ಜಿಲ್ಲಾವಾರು ಮಾಹಿತಿಯನ್ನು ಅನುಬಂಧ 'ಆ'ದಲ್ಲಿ ಲಗತ್ತಿಸಿದೆ.

ಆ) ಸ್ವಲ್ಪ ಮಟ್ಟಿಗೆ ವಾಹನಗಳ ಕಳ್ಳತನಗಳ ಹೆಚ್ಚಳ ಕಂಡು ಬಂದಿದೆ. ಇದನ್ನು ತಡೆಗಟ್ಟುವ ಕ್ರಮಗಳನ್ನು ಅನುಬಂಧ 'ಆ'ದಲ್ಲಿ ಲಗತ್ತಿಸಿದೆ.

ಇ) 'ಆ' ಪ್ರಶ್ನೆಗೆ ಉತ್ತರಿಸಿರುವುದರಿಂದ ಉದ್ಭವಿಸುವುದಿಲ್ಲ.